ರೂ. 4938.81 ಲಕ್ಷ ಹಾಗೂ ಜಂಗಲ್ ಕ್ಯಾಂಪ್ಸ್ ಅಂಡ್ ಟ್ರೇಲ್ಸ್‌ಗಳ ಯೋಜನೆಗಳನ್ನು ನಿರ್ಮಿಸಲು ರೂ. 703.00 ಲಕ್ಷಗಳನ್ನು ಬಿಡುಗಡೆ ಮಾಡಿ ವೆಚ್ಚ ಮಾಡಲಾಗಿದೆ.

ಆ) 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ನೂತನವಾಗಿ ಮಂಜೂರು ಮಾಡಿರುವ ಯೋಜನೆಗಳ ಸಂಖ್ಯೆ 12 ಆಗಿರುತ್ತದೆ. ಈ ಯೋಜನೆಗಳಿಗೆ ಮಂಜೂರಾದ ಮೊತ್ತ ರೂ. 4227.18 ಲಕ್ಷಗಳಾಗಿರುತ್ತದೆ ಹಾಗೂ ಯೋಜನೆಗಳನ್ನು ಪ್ರಾರಂಭಿಸಲು ಬಿಡುಗಡೆಯಾಗಿರುವ ಮೊದಲ ಕಂತಿನ ಮೊತ್ತ ರೂ. 3381.80 ಲಕ್ಷಗಳು.

ಇ) ರಾಜ್ಯದ ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯು ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ. ಯೋಜನೆಗಳ ವಿವರ ಕೆಳಗಿನಂತಿವೆ.

1) ಮಂಗಳೂರು ತಣ್ಣೀರುಭಾವಿ ಕಡಲತೀರ ಪ್ರದೇಶದಲ್ಲಿ ಆಕ್ವಾ ಮೆರಿನ್ ಪಾರ್ಕ್ ಹಾಗೂ ಗಾಲ್ಫ್ ಕೋರ್ಸ್‌ಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗಿದೆ.

2) ತಣ್ಣೀರುಭಾವಿಯಿಂದ ಸುಲ್ತಾನ್ ಬತ್ತೇರಿಯವರೆಗೆ ತೂಗು ಸೇತುವೆ ನಿರ್ಮಾಣ.

3) ಉತ್ತರ ಕನ್ನಡ ಜಿಲ್ಲೆಯ ಟ್ಯಾಗೂರ್ ಬೀಚ್ ಬಳಿ ಹೆಚ್ಚುವರಿ ಸೌಲಭ್ಯಗಳ ನಿರ್ಮಾಣ.

4) ಸೇಂಟ್ ಮೇರಿಸ್ ಐಲ್ಯಾಂಡ್‌ನಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ.

ಹೊಸದಾಗಿ ರಚನೆ ಮಾಡಿದ ಕರಾವಳಿ ಪ್ರಾಧಿಕಾರ

394(870) ಶ್ರೀ ಜೆ.ಡಿ. ನಾಯ್ಕ (ಭಟ್ಕಳ) ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹೊಸದಾಗಿ ರಚನೆ ಮಾಡಿದ ಕರಾವಳಿ ಪ್ರಾಧಿಕಾರಕ್ಕೆ ಕರಾವಳಿ ಭಾಗದ ಶಾಸಕರನ್ನು ಯಾವುದೇ ಸಭೆಗಳಿಗೆ ಕರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕರಾವಳಿ ಪ್ರಾಧಿಕಾರದ ಸಭೆಗಳಿಗೆ ಶಾಸಕರನ್ನು ಆಹ್ವಾನಿಸದಿರಲು ಕಾರಣವೇನು;

ಇ) ಕರಾವಳಿ ಪ್ರಾಧಿಕಾರ ರಚನೆಯಾದಾಗಿನಿಂದ ಇಂದಿನ ತನಕ ಎಷ್ಟು ಹಣ ಬಿಡುಗಡೆ ಆಗಿದೆ; (ಯೋಜನೆವಾರು ವಿವರ ನೀಡುವುದು)

ಈ) ಕರಾವಳಿ ಪ್ರಾಧಿಕಾರದಿಂದ ಹಮ್ಮಿಕೊಂಡ ಕಾರ್ಯಕ್ರಮಗಳೇನು? (ವಿವರ ನೀಡುವುದು)

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರು)

ಅ) ಇಲ್ಲ.

ಆ) ಈ ವಿಚಾರ ಉದ್ಭವಿಸುವುದಿಲ್ಲ.

ಇ) ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಯೋಜನಾ ಇಲಾಖೆಯ ಆಡಳಿತ ವ್ಯಾಪ್ತಿಗೆ ಬಂದಾಗಿನಿಂದ 2009–10ರ ಸಾಲಿನಲ್ಲಿ 100.00 ಲಕ್ಷಗಳನ್ನು ಹಾಗೂ 2010–11ನೇ ಸಾಲಿನಲ್ಲಿ 150 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಸಾಲಿನ 3ನೇ ಕಂತಿನ ಅನುದಾನವಾದ ರೂ. 75.00 ಲಕ್ಷ ಬಿಡುಗಡೆಗೊಳಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದೆ. ಸದರಿ ಹಣವನ್ನು ಶಕ್ಯತಾ ವರದಿಗಳು ಹಾಗೂ ಡಿಸಿಆರ್‌ಗಳನ್ನು ತಯಾರಿಸಲು ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ ಬಿಡುಗಡೆ ಮಾಡಲಾಗಿದೆ.

ಈ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1. ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಅತ್ರಾಡಿ ರಾಜ್ಯ ಹೆದ್ದಾರಿ–67ನ್ನು ಬಜ್ಪೆಯಿಂದ ಮಣಿಪಾಲದವರೆಗೆ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಗೆ (ಯೋಜನೆಯ ಅಂದಾಜು ವೆಚ್ಚ ಸುಮಾರು ರೂ. 250 ಕೋಟಿ) ಸಂಬಂಧಿಸಿದಂತೆ ಸುಮಾರು 75 ಕಿ.ಮೀ. ಉದ್ದ ರಸ್ತೆಗೆ ರೂ. 28,49,000/– ವೆಚ್ಚದ ಶಕ್ಯತಾ ವರದಿಯನ್ನು ತಯಾರಿಸಲು ಸರ್ಕಾರವು ಅನುಮೋದಿಸಿದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

2. ಮಂಗಳೂರು–ಕಾರವಾರ ಮೀನುಗಾರಿಕಾ ರಸ್ತೆಯನ್ನು ಮಂಗಳೂರಿನ ತಲಪಾಡಿ ಗಡಿಯಿಂದ ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯವರೆಗೆ ದ್ವಿ–ಪಥ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುವ (ಯೋಜನೆಯ ಅಂದಾಜು ವೆಚ್ಚ ಸುಮಾರು ರೂ. 900 ಕೋಟಿ) ಯೋಜನೆಗೆ ಸಂಬಂಧಿಸಿದಂತೆ ಸುಮಾರು

400 ಕಿ.ಮೀ. ಉದ್ದದ ರೂ. 1 ಕೋಟಿ 22 ಲಕ್ಷ ವೆಚ್ಚದ ಶಕ್ಯತಾ ವರದಿಯನ್ನು ತಯಾರಿಸಲು ಸರ್ಕಾರವು ಅನುಮೋದಿಸಿದಂತೆ.

3. ಮಂಗಳಾ ಕಾರ್ನಿಷ್ ವರ್ತುಲಾ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರವು ಶಕ್ಯತಾ ವರದಿಯನ್ನು ತಯಾರಿಸಲು ಕ್ರಮ ಕೈಗೊಂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಹಾಗೂ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಂಯೋಗದಲ್ಲಿ ಕಾಲಮಿತಿ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಪ್ರಕ್ರಿಯೆ ಮುಂದುವರೆಯುತ್ತಿದೆ.

4. ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಕರಾವಳಿಯ ಮೂರು ಜಿಲ್ಲೆಗಳ 10 ಪ್ರಮುಖ ಪಟ್ಟಣಗಳಲ್ಲಿ (ದಕ್ಷಿಣ ಕನ್ನಡ ಜಿಲ್ಲೆಯ ಪಡುಬಿದ್ರಿ, ಬಂಟ್ವಾಳ, ಕಿನ್ನಿಗೋಳಿ, ಉಡುಪಿ ಜಿಲ್ಲೆಯ ಉಡುಪಿ, ಉಪ್ಪುಂದ, ಯೆಡ್ತೆರೇ–ಬೈಂದೂರ್, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಶಿರಾಲಿ) ಸುಮಾರು 15 ಕೋಟಿ ರೂ. ವೆಚ್ಚದಲ್ಲಿ ಹೈದರಾಬಾದ್‌ನ ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ಆಧುನಿಕ ಮಹಿಳಾ ಮೀನು ಮಾರುಕಟ್ಟೆಗಳನ್ನು ಸ್ಥಾಪಿಸಲು ಅಗತ್ಯ ಕ್ರಮಕೈಗೊಂಡಿದೆ.

ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ

395 (871) ಶ್ರೀ ಜೆ.ಡಿ. ನಾಯ್ಕ (ಭಟ್ಕಳ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕರಾವಳಿ ಪ್ರವಾಸೋದ್ಯಮದ ಅಭಿವೃದ್ಧಿ ಬಗ್ಗೆ ಇಲಾಖೆಯಿಂದ ರಸ್ತೆ, ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಭಟ್ಕಳ–ಹೊನ್ನಾವರ ತಾಲ್ಲೂಕಿಗೆ ಎಷ್ಟು ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

ಆ) ಪ್ರವಾಸೋದ್ಯಮ ಇಲಾಖೆಯಿಂದ ಕರಾವಳಿ ಜಿಲ್ಲೆಗಳಲ್ಲಿ ಯಾವ ಪ್ರದೇಶವನ್ನು ಪ್ರವಾಸೋದ್ಯಮ ಸ್ಥಳವೆಂದು ಗುರುತಿಸಲಾಗಿದೆ (ವಿವರ ನೀಡುವುದು)

ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನಸೇವಾ ಸಚಿವರು)